**ಓಎಸ್ ನಂಃ 289/2022 ಪಿ.ಡಬ್ಲ್ಯೂ - 2**

**ದಿನಾಂಕಃ 25.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ. ಎನ್.ಎಂ.ಎಸ್. ವಕೀಲರಿಂದಃ

ನಿಮಗೆ ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆಯಾ ಎಂದರೆ ಬಂದಿರುತ್ತದೆ ಎನ್ನುತ್ತಾರೆ. ನೀವು ಮರುಗಮಲ್ಲ ಹಳ್ಳಿಯಲ್ಲಿ ವಾಸವಾಗಿರುವ ಬಗ್ಗೆ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ನೀವು ಮುರುಗಮಲ್ಲ ಗ್ರಾಮದಲ್ಲಿ ಇಲ್ಲ ಚಿಂತಾಮಣಿಯಲ್ಲಿ ಇರುತ್ತೀರಾ ಎಂದರೆ ಸಾಕ್ಷಿ ಮರುಗಮಲ್ಲ ಗ್ರಾಮದಲ್ಲಿ ಜಾಸ್ತಿ ಇರುತ್ತೆನೆ ಎನ್ನುತ್ತಾರೆ. ನಿಮ್ಮ ಸಂಸಾರ ಮತ್ತು ಮನೆ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿ ಚಿಂತಾಮಣಿಯಲ್ಲಿ ಇರುತ್ತದೆ, ಜಮೀನು ಮರುಗಮಲ್ಲ ಗ್ರಾಮದಲ್ಲಿ ಇರುತ್ತದೆ. ನಿಮ್ಮ ಜಮೀನಿನ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೆನೆ ಎನ್ನುತ್ತಾರೆ. ಸದರಿ ಜಮೀನಿನ ಬಗ್ಗೆ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಪಹಣಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ನಿಮ್ಮ ಹೆಸರಿನ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನೀವು ಮುರುಗಮಲ್ಲ ಗ್ರಾಮದಲ್ಲಿ ವಾಸಿಸುವ ಬಗ್ಗೆ ದಾಖಲಾತಿ ಕೊಟ್ಟಿಲ್ಲ ಎಂದರೆ ಇಲ್ಲ ಎನ್ನುತ್ತಾರೆ. ವಾದಿಯ ಹೆಸರಿನಲ್ಲಿ ಇರುವ ದಾಖಲಾತಿಗಳನ್ನು ನೋಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ವಾದಿ ಯಾವಾಗ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ **1982** ರಲ್ಲಿ ಎನ್ನುತ್ತಾರೆ. ಅದರ ಕ್ರಯಪತ್ರ ನೋಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿಗಳು ಯಾವಾಗ ವಾದಿಗೆ ತೊಂದರೆ ಕೊಟ್ಟಿರುತ್ತಾರೆ ಎಂದು ನೋಡಿರುತ್ತೀರಾ ಎಂದರೆ **1982** ರಲ್ಲಿ ತೊಂದರೆ

ಮಾಡಿರುತ್ತಾರೆ ಎನ್ನುತ್ತಾರೆ. ವಾದಿ ದಾವಾ ಆಸ್ತಿಗೆ ಮಾಲಿಕರಲ್ಲ, ರೆಡ್ಡಿಕೃಷ್ಣ ಎಂಬುವವರು ಕರೆದುಕೊಂಡು ಬಂದು ಸುಳ್ಳು ಸಾಕ್ಷ್ಯ ಹೇಳಿಸಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.